**OS.No**.14/2018 **PW**-1

**ದಿನಾಂಕಃ 21.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಶ್ರೀ. ಕೆ ಕೆ ಆರ್ ವಕೀಲರಿಂದಃ**

ದಿನಾಂಕ 07.01.2019ರಂದು ನನ್ನ ತಂದೆ ಮೃತ ರೇಣುಕರಾಧ್ಯ ಅವರು ಭಾರತ್ ಯುನಿವರ್ಸಲ್ ಕಾಲೇಜಿನ ಪ್ರಾಂಶುಪಾಲರಾದ ಕೆ ವಿ ಮಂಜುನಾಥ ಅವರಿಗೆ ಸ್ಪೆಷಲ್ ಪವರ್ ಆಫ್ ಅಟೋನಿ ಬರೆದುಕೊಟ್ಟಿದ್ದರು ಎಂದರೆ ಹೌದು. ಸದರಿ ಸ್ಪೆಷಲ್ ಪವರ್ ಆಫ್ ಅಟೋನಿಯಲ್ಲಿ ಅನ್ಯ ಸಂಕ್ರಮಣವಾದ ನಂತರ ಕಾಲೇಜು ಕಟ್ಟದ ಕಟ್ಟಲು ಮತ್ತು ಶಿಕ್ಷಕರ ತರಭೇತಿ ಕಾಲೇಜಿನ ಕಟ್ಟಡ ನಿರ್ಮಾಣ ಮಾಡಲು ಹಾಗೂ ಕಾರ್ಯದರ್ಶಿಯಾದ ಕೆ ವಿ ಶುಂಭುಲಿಂಗಪ್ಪ ಅವರಿಗೆ ಸ್ವತ್ತನ್ನು ಕ್ರಯ ಮಾಡಲು ಅಧಿಕಾರ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರೆದು ನಂಬಿಕಸ್ತರಾಗಿದ್ದರಿಂದ ನಿಮಗೆ ಮಾತ್ರ ಅಧಿಕಾರ ಕೊಟ್ಟಿರುತ್ತೇನೆ ಎಂದು ಕೆ ವಿ ಮಂಜುನಾಥ ಅವರ ಬಗ್ಗೆ ಸದರಿ ಪತ್ರದಲ್ಲಿ ಸ್ಪಷ್ಟವಾಗಿ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ತಂದೆ ಸಂಸ್ಥೆಯಲ್ಲಿ ಉಪಾಧ್ಯಕ್ಷರು ಮತ್ತು ನಿರ್ದೇಶಕರಾಗಿದ್ದ ಸಂರ್ಭದಲ್ಲಿ ಜಿ ಪಿ ಎ ಮತ್ತು ಎಸ್ ಪಿ ಎ ಬರೆದಿರುತ್ತಾರೆ ಎಂದರೆ ಗೊತ್ತಿಲ್ಲ.

ಜಿ ಪಿ ಎ ಆಧಾರದ ಮೇಲೆ ಕೆ ವಿ ಶುಂಭಲಿಂಗಪ್ಪ ಅವರು ಸರ್ವೆ ನಂ 43/2(ಹೊಸ ಸರ್ವೆ ನಂಬರ್43/15) ರಲ್ಲಿಯ 36 ಗುಂಟೆಯ ಸ್ವತ್ತನ್ನು ದಿಃ 28.10.2015 ರಂದು ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ದಿಃ 06.11.2015 ರಂದು ಜಿ ಪಿ ಎ ಆಧಾರದ ಮೇಲೆ ಕೆ ವಿ ಶುಂಭುಲಿಂಗಪ್ಪ ಅವರು ಹೊಸ ಸರ್ವೆ ನಂಬರ್ 43/24ರಲ್ಲಿಯು 10 ಗುಂಟೆಯ ಆಸ್ತಿಯನ್ನು ಪಾಲ್ ಕೂಗೆರ್ ಅವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಹೌದು. ದಿಃ 17.10.2015 ರಂದು ಜಿ ಪಿ ಎ ಆಧಾರದ ಮೇಲೆ ಕೆ ವಿ ಶುಂಭುಲಿಂಗಪ್ಪ ಅವರು ಹೊಸ ಸರ್ವೆ ನಂಬರ್ 43/15ರಲ್ಲಿಯ1 ಎಕರೆ ಆಸ್ತಿಯನ್ನು ಪಾಲ್ ಕೂಗೆರ್ ಅವರಿಗೆ ಮಾರಾಟ

ಮಾಡಿರುತ್ತಾರೆ ಎಂದರೆ ಹೌದು. ಪಾಲ್ ಕೂಗೆರ್ ಅವರು ಸಹ ಭಾರತಿ ಯುನಿವರಿಸಲ್ ಎಜುಕೇಶನ್ ಸೊಸೈಟಿಯ ಸದಸ್ಯರು ಎಂದರೆ ಗೊತ್ತಿಲ್ಲ. ಸರ್ವೆ ನಂ 43/15, 43/24ರ ಸ್ವತ್ತುಗಳು ಭಾರತ್ ಯುನಿವರಿಸಲ್ ಸೊಸೈಟಿಯ ಮಾಲಿಕತ್ವಕ್ಕೆ ಸಂಬಂಧಿಸಿದ ಆಸ್ತಿಗಳೇ ಹೊರತು ಅವುಗಳು ನನ್ನ ವೈಯಕ್ತಿಕ ಆಸ್ತಿಗಳಲ್ಲ ಎಂದು ಪಾಲ್ ಕೂಗೆರ್ ಅವರು ಓ ಎಸ್ ನಂಬರ್ 1/16ರ ಲ್ಲಿ ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆ ಎಂದರೆ ಗೊತ್ತಿಲ್ಲ.

ನನ್ನ ತಾಯಿ ಇದೇ ಕ್ರಯ ಪತ್ರಗಳ ಆಧಾರದ ಮೇಲೆ ಮಾನ್ಯ ಸಿವಿಲ್ ನ್ಯಾಯಾಲಯದ ಮುಂದೆ ಪಿ ಸಿ ಆರ್ ನಂಬರ್ 382/16 ರಂತೆ ಖಾಸಗಿ ದೂರು ಸಲ್ಲಿಸಿದ್ದು ತನಿಖೆಯ ನಂತರ ಬಿ ಅಂತಿಮ ವರದಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಈ ಕ್ರಯ ಪತ್ರಗಳ ಮೇಲೆ ಅಲ್ಲ ಸರ್ವೆ ನಂಬರ್ 43/26ಕ್ಕೆ ಸಂಬಂಧಿಸಿದ ಕ್ರಯ ಪತ್ರದ ಮೇಲೆ ಹಾಕಿದ್ದರು ಎಂದು ನುಡಿಯುತ್ತಾರೆ. ಜಿ ಪಿ ಎ ಮತ್ತು ಎಸ್ ಪಿ ಎ ಗಳ ಅಧಾರದ ಮೇಲೆ ನನ್ನ ತಂದೆ ಉಪಾಧ್ಯಕ್ಷರಾದ ಸಂದರ್ಬದಲ್ಲಿ ಹಾಗೂ ನಾನು ನಿರ್ದೇಶಕಿಯಾದ ಸಂಧರ್ಭದಲ್ಲಿ ಶಾಲಾ ಕಾಲೇಜು ಕಟ್ಟಡ ಹಾಗೂ ಆವರಣಗಳು ಅಭಿವೃದ್ಧಿಗೊಂಡಿರುತ್ತವೆ ಎಂದರೆ ಸರಿಯಲ್ಲ. ನಿರ್ದೇಶಕಿ ಹುದ್ದೆ ಇಂದ ನೀವೇ ಸ್ವಯಂ ರಾಜಿನಾಮೆ ಕೊಟ್ಟಿದೀರ ಅಥವಾ ಸಂಸ್ಥೆಯವರೇ ನಿಮ್ಮನ್ನು ವಜಾ ಗೊಳಿಸಿರುತ್ತಾರಾ ಎಂದರೆ ಸಾಕ್ಷಿ ನೆನಪಿಲ್ಲ ಅಂತ ನುಡಿಯುತ್ತಾರೆ. ನನ್ನ ತಂದೆ ಮೃತ ರೇಣುಕಾರಾಧ್ಯರವರು ಜಿ ಪಿ ಎ ಮತ್ತು ಎಸ್ ಎ ಗಳನ್ನು ಉಪನೊಂದಣಾಧಿಕಾರಿಗಳ ಕಾರ್ಯಲಯದಲ್ಲಿ ರದ್ದು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ರದ್ದು ಪಡಿಸಿದ್ದರ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತೀರಾ ಎಂದರೆ ಸಾಕ್ಷಿ ಜನತಾ ಮಾಧ್ಯಮ ದಲ್ಲಿ ನನ್ನ ತಂದೆ ಜಿ ಪಿ ಎ ಮಸುತ ಎಸ್ ಪಿ ಎ ಗಳನ್ನು ರದ್ದು ಪಡಿಸಿದ್ದರ ಬಗ್ಗೆ ಪ್ರಕರಣ ಮಾಡಿದ್ದರು ಮತ್ತು

ಶಂಭುಲಿಂಗಪ್ಪ ಅವರಿಗೆ ನೋಟೀಸನ್ನು ಕಳುಹಿಸಿದ್ದರು ಅಲ್ಲದೆ ನೊಂದಣಾಧಿಕಾರಿಗಳ ಕಛೇರಿಗೂ ಸಹ ನೋಟೀಸುಗಳನ್ನು ಕಳುಹಿಸಿದ್ದರು. ನೊಂದಣಿಯ ಪತ್ರಗಳ ಮೂಲಕ ರದ್ದು ಪಡಿಸಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಭಾರತ್ ಯುನಿವರ್ಸಲ್ ಸೊಸೈಟಿಯ ಶಾಲಾ ಕಾಲೇಜು ಕಟ್ಟಡ, ಆವರಣ ಮತ್ತು ಸಮಸ್ತ ಆಸ್ತಿ ಸುಮಾರು 4 ರಿಂದ 5 ಕೋಟಿ ಬೆಲೆ ಬಾಳುತ್ತದೆ ಎಂದರೆ ಗೊತ್ತಿಲ್ಲ. ಎಲ್ಲಾ ಆಸ್ತಿಗಳು ಭಾರತ್ ಯುನಿವರ್ಸಲ್ ಸೊಸೈಟಿಯ (ರಿ)ರವರಿಗೆ ಸೇರಿದ್ದು ಎಂದರೆ ಸರಿಯಲ್ಲ. ಯಾವುದೇ ಒಂದು ನೊಂದಯಿತ ಸಂಸ್ಥೆಯ ಅಧ್ಯಕ್ಷರಿಗಾಗಲೇ ಉಪಾಧ್ಯಕ್ಷರಿಗಾಗಲಿ ಅಥವಾ ಅಲ್ಲಿ ಸೇವೆ ಸಲ್ಲಿಸಿದ ಪದಾಧಿಕಾರಿಗಳಿಗಾಗಲಿ ಸಂಸ್ಥೆಯ ಆಸ್ತಿಯಲ್ಲಿ ಪಾಲು ಕೇಳುವ ಅಧಿಕಾರ ಇಲ್ಲ ಎಂದರೆ ಸಾಕ್ಷಿ ಸಾಮಾನ್ಯವಾಗಿ ಇರುವುದಿಲ್ಲ ಆದರೆ ನಮ್ಮ ಪ್ರಕರಣದಲ್ಲಿ ದಾವಾ ಆಸ್ತಿಯಾ ವೈಯಕ್ತಿಕವಾಗಿ ಆಸ್ತಿ ನೊಂದಣಿ ಮಾಡಿಸಿಕೊಂಡಿದ್ದರಿಂದ ಆಯಲ್ಲಿ ಹಕ್ಕಿದೆ ಎಂದು ನುಡಿಯುತ್ತಾರೆ . ಭಾರತ್ ಯುನಿವರ್ಸಲ್ ಸೊಸೈಟಿಯ ಸಮಸ್ತ ಆಸ್ತಿಗಳ ಮೇಲೆ ಸಂಸ್ಥೆಯವರೆ ಕಂದಾಯವನ್ನು ಕಟ್ಟುತ್ತಾ ಬಂದಿದ್ದಾರೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಗಳ ಮೇಲೆ ನಮಗಾಗಲೀ ಅಥವಾ 1ನೇ ಪ್ರತಿವಾದಿಗಾಗಲೀ ವೈಯಕ್ತಿಕ ಹಕ್ಕಿಲ್ಲ ಎಂದರೆ ಸರಿಯಲ್ಲ . ದಾವಾ ಆಸ್ತಿ 2ನೇ ಪ್ರತಿವಾದಿಯ ಅಭಾದಿತ ಸ್ವತ್ತು ಎಂದರೆ ಸರಿಯಲ್ಲ.

ಈ ಸಂಸ್ಥೆಯಲ್ಲಿ ಈಗ 460 ವಿದ್ಯಾರ್ಥಿಗಳು ಓದುತ್ತಾ ಇದ್ದಾರೆ ಎಂದರೆ ಗೊತ್ತಿಲ್ಲ . ದಾವಾ ಆಸ್ತಿಗಳ ಮೇಲೆ ನನಗೆ ವೈಯಕ್ತಿಕ ಇರದೇ ಇದ್ದರೂ ಸಹ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ . ನಾನು ಸಂಸ್ಥೆಯ ಅಭಿವೃದ್ಧಿಗೆ ಮಾರಾಕವಾಗಿದ್ದರಿಂದ ನನ್ನನ್ನು ನಿರ್ದೆಶಕಿ ಹುದ್ದೆಯಿಂದ ವಜಾ ಗೊಳಿಸಿರುತ್ತಾರೆ ಎಂದರೆ ಸರಿಯಲ್ಲ . ನಿರ್ದೇಶಕಿ ಆಗಿದ್ದ ಸಂದಭರ್ದಲ್ಲಿ ಸುಮಾರು 2 ವರ್ಷಗಳ ಕಾಲ ನಾನು ಸಂಸ್ಥೆಯ ನಡಾವಳಿಗಳಲ್ಲಿ ಗೈರು ಹಾಜರಾಗಿದ್ದೆ

ಎಂದರೆ ಸಾಕ್ಷಿ ಕೆಲವೊಂದು ಸಾರಿ ನನಗೆ ತಿಳಿಸುತ್ತಿರಲ್ಲಿಲ್ಲ ಅಲ್ಲದೆ ಕೆಲವೊಂದು ಕಾನೂನು ಬಾಹಿರ್ ಚಟುವಟಿಕೆಗಳಿಗೆ ಸಭೆ ಮಾಡುತ್ತಿದ್ದರು ಹಾಗಾಗಿ ನಾನು ಗೈರು ಹಾಜರಿದ್ದೆ ಎಂದು ನುಡಿಯುತ್ತಾರೆ. ಕಾನೂನು ಬಾಹಿರ ಚಟುವಟಿಕೆಗಳ ಸಭೆ ಏನು ಎಂದರೆ ಅವರಿಗೆ ಸಂಬಗಂಧಿಸದೇ ಇರುವ ಆಸ್ತಿಗಳನ್ನು ಅವರ ಹೆಸರಿಗೆ ಅವರೇ ನೊಂದಣಿ ಮಾಡಿಕೊಳ್ಳುವುದು ಮತ್ತು ಪ್ರೊಸೀಡಿಂಗ್ಸ್ ಗಳನ್ನು ಖಾಲಿ ಬಿಟ್ಟು ನಮ್ಮಿಂದ ಸಹಿ ಹಾಕಿಸಿಕೊಂಡು ಆಮೇಲೆ ಅವುಗಳನ್ನು ಬರೆಯುವುದು ಮಾಡುತ್ತಿದ್ದರು. ಸಭೆಗೆ ಹೋಗಿ ನಾನು ಪ್ರತಿರೋಧ ಮಾಡಿರುತ್ತೇನೆ ಆದರೆ ಲಿಖಿತ ರೂಪದಲ್ಲಿ ಯಾವುದೇ ನೋಟೀಸು ಕೊಟ್ಟಿಲ್ಲ. ನಾನು ಮತ್ತು ನನ್ನ ತಂದೆ ಸಂಸ್ಥೆಯ ಆಸ್ತಿಯನ್ನು ಕಬಳಿಸಲು ಪ್ರಯತ್ನ ಮಾಡಿದ್ದರಿಂದ ಆಸ್ತಿಯನ್ನು ಇನ್ನೊಬ್ಬ ಸದಸ್ಯರ ಹೆಸರಿಗೆ ವರ್ಗಾವಣೆ ಮಾಡಲಾಯಿತು ಎಂದರೆ ಸರಿಯಲ್ಲ . ನಾನು ವೈಯಕ್ತಿಕ ದ್ವೇಷಕ್ಕೊಸ್ಕರ ಈ ದಾವೆ ಸಲ್ಲಿಸಿದ್ದೇನೆ ಹೊರತು ಯಾವುದೇ ಸಕಾರಣಗಳಿಲ್ಲ ಎಂದರೆ ಸರಿಯಲ್ಲ. ಭಾರತ್ ಯುನಿವರ್ಸಲ್ ಸೊಸೈಟಿಯ ಆಸ್ತಿಗಳ ಮೇಲೆ ನನಗೆ ಯಾವುದೇ ಹಿಸ್ಸೆಯ ಹಕ್ಕು ಇಲ್ಲ ಎಂದರೆ ಸರಿಯಲ್ಲ . ನಾನು ಪ್ರಕರಣಗಳನ್ನು ದಾಖಲಿಸುವ ಮೂಲಕ ಸಂಸ್ಥೆಯ ಜನಪ್ರಿಯತೆಗೆ ಧಕ್ಕೆ ಉಂಟು ಮಾಡಿದ್ದೇನೆ ಎಂದರೆ ಸರಿಯಲ್ಲ.

3ನೇ ಪ್ರತಿವಾದಿ ಮತ್ತು ಅವರ ಪರ ವಕೀಲರನ್ನು ಕೂಗಿ ಕರೆಸಲಾಯಿತು ಗೈರು ಹಾಜರಿಯ ಮೇರೆಗೆ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ ಇಲ್ಲಃ**

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)

ಹಿ.ವ್ಯ.ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.